**1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 842-2022**

**ಸಿ.ಡಬ್ಲೂ್ಯ -1, ಪಿ.ಡಬ್ಲೂ್ಯ -1**

| | | |
|---|---|---|
| ಸಾಕ್ಷಿದಾರರ ಹೆಸರು | : | ವನಿತಾ |
| ಗಂಡನ ಹೆಸರು | : | ಕೃಷ್ಣಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಸಾಗರ. |

**ಪ್ರಮಾಣೀಕರಿಸಿದ ದಿನಾಂಕ :09.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸ 4 ನನ್ನ ತಾಯಿ. ಚಾಸ 5 ನನ್ನ ತಮ್ಮ. ಚಾಸ 6 ನನ್ನ ತಂಗಿ. ಆರೋಪಿತರ ಪರಿಚಯವಿಲ್ಲ. ದಿಃ09.05.2022 ರಂದು ಸಂಜೆ 4.30 ಗಂಟೆಯ ಸಮಯದಲ್ಲಿ ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 120 ಮತ್ತು 121 ರ ಅಡಿಕೆ ತೋಟದಲ್ಲಿ ಬೇಲಿ ಕಟ್ಟುವ ಕೆಲಸವನ್ನು ನಾನು ಮತ್ತು ನನ್ನ ತಾಯಿ ಚಾಸ 4 ಮಾಡುತ್ತಿದ್ದೆವು. ಆಗ ಆರೋಪಿತರು ಸ್ಥಳಕ್ಕೆ ಬಂದು ಇಲ್ಲಿ ಏಕೆ ಕೆಲಸ ಮಾಡುತ್ತಿದ್ದೀರಾ ಹುಚ್ಚಿ ಮುಂಡೆ ಎಂದು ಅವಾಚ್ಯವಾಗಿ ಬೈದು, ನನ್ನ ಕುತ್ತಿಗೆಯನ್ನು 1ನೇ ಆರೋಪಿ ಹಿಡಿದು ಹೊಡೆದ. ನನ್ನ ಬಟ್ಟೆಯನ್ನು ಹರಿದು ಹಾಕಿದ. ನಾನು ನನ್ನ ತಾಯಿಯನ್ನು ಕರೆದಾಗ ನನ್ನ ತಾಯಿ ಅಲ್ಲಿಗೆ ಬಂದರು. ತೋಟಕ್ಕೆ ಬಂದರೆ ಬಿಡುವುದಿಲ್ಲ ಕೊಲೆ ಮಾಡುವುದಾಗಿ ಆರೋಪಿತರು ನನಗೆ ಬೆದರಿಸಿದರು. ಆಗ ಸ್ಥಳಕ್ಕೆ ನನ್ನ ತಮ್ಮ-ತಂಗಿ ಚಾಸ 5 ಮತ್ತು 6 ಬಂದ ನಂತರ ಆರೋಪಿತರು ಅಲ್ಲಿಂದ ಹೋದರು. ನಂತರ ನನ್ನನ್ನು ಸಾಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದರು.

2. ಆಸ್ಪತ್ರೆಗೆ ಪೊಲೀಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು. ದಿಃ10.05.2022 ರಂದು ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಚಾಸ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯ ಕ್ರಮವನ್ನು ಜರುಗಿಸಿದರು. ಪಂಚನಾಮೆಯ ಕಾಲಕ್ಕೆ ಪೋಟೋ ತೆಗೆಯಲಾಗಿರುತ್ತದೆ.

3. ಸಾಕ್ಷಿಗಿ ಕಡತದಿಂದ ಒಂದು ದಾಖಲೆಯನ್ನು ತೆಗೆದು ತೋರಿಸಲಾಗಿ, ಸಾಕ್ಷಿಯು ದೂರು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, 2 ಛಾಯಾಚಿತ್ರಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಆ ದಿನ ನನಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡಿ ಬಡಿ ಮಾಡಿ ಜೀವ ಬೆದರಿಕೆ ಹಾಕಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಆರೋಪಿತರ ಸ್ಥಾನದಲ್ಲಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪಿರ್ಯಾದಿಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>**

1. ಆರೋಪಿತರು ಅವಾಚ್ಯ ಶಬ್ದಗಳಿಂದ ನಿಂದಿಸಿ ನನ್ನನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಕೈಯಿಂದ ಕೆನ್ನೆಗೆ ಹೊಡೆದು ಕೆಳಗೆ ಬೀಳಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದಃ-</u>**

1. ನಾನು ಸಾಗರದಲ್ಲಿ ವಾಸ ಮಾಡುತ್ತೇನೆ. ನನ್ನ ಗಂಡನ ಮನೆ ಸೊರಬ ತಾಲ್ಲೂಕಿನ ಮಳಲಗದ್ದೆ ಗ್ರಾಮವಾಗಿರುತ್ತದೆ. ನಾನು ನನ್ನ ಗಂಡನ ಮನೆಯಲ್ಲಿ 2 ವರ್ಷ ಇದ್ದೆ, ಸಾಗರದಲ್ಲಿ ಬಂದು ನೆಲೆಸಿ 22 ವರ್ಷಗಳಾಗಿರುತ್ತದೆ. ಸಾಗರ ನಗರದ ಗಂಗಾ ಪರಮೇಶ್ವರಿ ರಸ್ತೆಯಲ್ಲಿ ಇರುವ ಮನೆಯಲ್ಲಿ ಬಾಡಿಗೆಗೆ ಇರುತ್ತೇನೆ. ನನ್ನ ಗಂಡ ಗಾರೆ ಕೆಲಸ ಮಾಡುತ್ತಾರೆ. ಚಾಸ 6 ಸೊರಬ ತಾಲ್ಲೂಕಿನ ಹಲಸಿನಕೊಪ್ಪ ಗ್ರಾಮಕ್ಕೆ ಮದುವೆಯಾಗಿರುತ್ತಾರೆ. ಚಾಸ 6 ತನ್ನ ಗಂಡನ ಮನೆಯಲ್ಲಿಯೇ ವಾಸವಾಗಿರುತ್ತಾರೆ. ನಾವು ಇಬ್ಬರು ಹೆಣ್ಣು ಮಕ್ಕಳು ಒಬ್ಬ ತಮ್ಮ ಇರುತ್ತಾನೆ.

2. ಈ ಘಟನೆಯಾಗುವ 4-5 ದಿನಗಳ ಹಿಂದೆ ನನ್ನ ತಾಯಿ ಮನೆಗೆ ನಾನು ಹೋಗಿದ್ದೆ. ಆ ಸಮಯದಲ್ಲಿ ನನ್ನ ತಂಗಿ ಚಾಸ 6 ಒಂದು ವಾರಗಳ ಹಿಂದೆಯೇ ನಮ್ಮ ತಾಯಿಯ ಮನೆಗೆ ಬಂದಿದ್ದಳು. ನನ್ನ ತಮ್ಮ ಚಾಸ 5 ತೋಟದ ಕೆಲಸ ಮಾಡುತ್ತಾನೆ. ಚಾಸ 5 ರೈತ ಸಂಘದ ಮುಖಂಡನಾಗಿರುತ್ತಾನೆ. ಚಾಸ 5 ರೈತ ಸಂಘಟನೆಯ ಪ್ರತಿಭಟನೆಯಲ್ಲಿ ಮುಂದಾಳತ್ವ ವಹಿಸುತ್ತಾನೆ ಎಂದರೆ ಸರಿ. ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. 1 ನೇ ಆರೋಪಿಯ ತಾಯಿ ನಾವು ಗಲಾಟೆ ಮಾಡಿದೆವು ಎಂದು ನನ್ನ ವಿರುದ್ಧ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ.

3. ಈ ಘಟನೆ ಆದ ದಿನ ಜಮೀನಿನಲ್ಲಿ ನಾನು, ಚಾಸ 4 ರಿಂದ 6 ರವರು ಸೇರಿ ಒಟ್ಟಾಗಿ ಕೆಲಸ ಮಾಡುತ್ತಿದ್ದೆವು. ಚಾಸ 4, 1 ನೇ ಆರೋಪಿಯ ವಿರುದ್ಧ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 64 ರಲ್ಲಿ 1 ನೇ ಆರೋಪಿ ಅಡಿಕೆ ಸಸಿಗಳನ್ನು ನೆಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನಾನು ನೀಡಿರುವುದಿಲ್ಲ. ಶ್ರೀಮತಿ ರಾಧಮ್ಮ ಕೋಂ ಮಹದೇವ ರವರು ಸಾಗುವಳಿ ಮಾಡಿ ಅಡಿಕೆ ಸಸಿ ನೆಟ್ಟಿರುವ ಜಾಗದಲ್ಲಿ ಪಂಚನಾಮೆ ಮಾಡಲಾಗಿದೆ ಎಂದು ಬರೆದಿರುವ ಪಂಚನಾಮೆಗೆ ನಾನು ಸಹಿ ಮಾಡಿರುವುದಿಲ್ಲ.

4. ನನ್ನ ಬಟ್ಟೆಯನ್ನು ಆರೋಪಿತರು ಹಿಡಿದು ಹರಿದು ಹಾಕಿದರು ಎಂದು ಪೊಲೀಸರ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಪೊಲೀಸರು ಆ ಕುರಿತು ಬರವಣಿಗೆ ಮಾಡಿಕೊಂಡರೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ. ಪೊಲೀಸರು ನಾನು ಹೇಳಿದ ರೀತಿಯಲ್ಲಿ ಹೇಳಿಕೆಯನ್ನು ಬರೆದುಕೊಂಡಿರುವುದಿಲ್ಲ. ನಾನು ಪೊಲೀಸರ ಬಳಿ ನಾನು ಹೇಳಿದ್ದನ್ನು ಏಕೆ ಬರೆದುಕೊಂಡಿಲ್ಲ ಎಂದು ಪ್ರಶ್ನೆ ಮಾಡಿರುತ್ತೇನೆ. ನಾನು ಹೇಳಿದಂತೆ ಬರೆದುಕೊಳ್ಳದ ಕಾರಣ ಸಹಿ ಮಾಡುವುದಿಲ್ಲವೆಂದು ನಾನು ಪ್ರತಿಭಟಿಸಿರುವುದಿಲ್ಲ. ಪೊಲೀಸರು ಏನು ಬರೆದುಕೊಂಡಿದ್ದಾರೆಂದು ಓದಿ ಸಹಿ ಮಾಡಿರುತ್ತೇನೆ.

5. ಈ ಘಟನೆಗೆ ಸಂಬಂಧಿಸಿದಂತೆ ನಾನು 4 ದಿನಗಳ ನಂತರ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು 2 ದಿನಗಳವರೆಗೆ ಆಸ್ಪತ್ರೆಯಲ್ಲಿದ್ದೆ. ನನಗೆ ಆದ ಗಾಯಗಳ ಕುರಿತು ನಾನು ವೈದ್ಯರ ಮುಂದೆ ಹೇಳಿರುತ್ತೇನೆ.

ನಾನು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನನ್ನಿಂದ 3 ರಿಂದ 4 ಸಹಿಗಳನ್ನು ಪಡೆದಿರುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋದ ದಿನಾಂಕ ನೆನಪಿಲ್ಲ. ನಾನು ಆಸ್ಪತ್ರೆಗೆ ಹೋದಾಗ 5.30 ಗಂಟೆಯಾಗಿತ್ತು. ನನ್ನನ್ನು ವೈದ್ಯರು 5 ಗಂಟೆಗೆ ಪರೀಕ್ಷಿಸಿದರು. ನಾವು ಆಸ್ಪತ್ರೆಗೆ ಹೋಗುವಷ್ಟರಲ್ಲಿಯೇ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದು ವೈದ್ಯರು ವರದಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಒಳಗೆ ಉಸಿರಾಡಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ತಾಯಿ ನಮ್ಮ ಮೇಲೆ ಪ್ರಕರಣವನ್ನು ದಾಖಲಿಸಿದ ಕಾರಣ ಅದರಿಂದ ಬಚಾವಾಗಲು ನಾವು ಈ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸ 2 ಮತ್ತು 3 ರವರನ್ನು ಪೊಲೀಸ್ ಠಾಣೆಗೆ ನಾವು ಕರೆದುಕೊಂಡು ಹೋಗಿರುವುದಿಲ್ಲ.

6. ಚಾಸ 2 ಮತ್ತು 3 ರವರನ್ನು ಮಹಜರ್ ಗೆಂದು ನಾವೇ ಕರೆದುಕೊಂಡು ಹೋಗಿರುತ್ತೇವೆ. ಚಾಸ 2 ಮತ್ತು 3 ರವರನ್ನು ಸಂಜೆ 4 ಗಂಟೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ಪ್ರಕರಣದ ಪಂಚನಾಮೆಯ ಕಾಲಕ್ಕೆ ಚಾಸ 5 ಸ್ಥಳದಲ್ಲಿ ಇದ್ದರು. ಚಾಸ 5 ರವರ ಸಹಿಯನ್ನು ಪಂಚನಾಮೆಗೆ ತೆಗೆದುಕೊಳ್ಳಲಾಗಿರುತ್ತದೆ. ಆ ದಿನ 4 ಜನ ಪೊಲೀಸರು ಬಂದಿದ್ದರು. ನಮ್ಮ ಊರಿನವರು 4-5 ಜನ ಬಂದಿದ್ದರು. ಪೊಲೀಸರು ಊರಿನವರು ಮತ್ತು ಎಲ್ಲರನ್ನೂ ಸೇರಿಸಿ ಪೋಟೋ ತೆಗೆಯಲಿಲ್ಲ, ನನ್ನನ್ನು ಮತ್ತು ಚಾಸ 2 ಮತ್ತು 3 ರವರ ಪೋಟೋಗಳನ್ನು ತೆಗೆದಿರುತ್ತಾರೆ. ಚಾಸ 2 ಮತ್ತು 3 ಪೊಲೀಸರು ಏನು ಬರೆದಿದ್ದಾರೆಂದು ಓದಿರುವುದಿಲ್ಲ. ನಾನೂ ಸಹ ಪೊಲೀಸರು ಏನು ಬರೆದರು ಎಂದು ಓದಿರುವುದಿಲ್ಲ. ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮಂಕಳಲೆ ಗ್ರಾಮದ ತೋಟಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪೊಲೀಸರು ನಮ್ಮಿಂದ ಪಡೆದಿರುವುದಿಲ್ಲ.

7. ಆರೋಪಿತರು ನನ್ನನ್ನು ಅಡ್ಡಗಟ್ಟಿ ತಡೆದು, ಅವಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆದಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯ ಕುಟುಂಬಕ್ಕೆ ಸೇರಿದ ಅಡಿಕೆ ತೋಟದಿಂದ ಅವರನ್ನು ವಕ್ಕಲೆಬ್ಬಿಸುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಈ ಪ್ರಕರಣ ದಾಖಲಾಗುವ ಮೊದಲೇ 1 ನೇ ಆರೋಪಿಯ ಕುಟುಂಬದ ವಿರುದ್ಧ ಸಿವಿಲ್ ದಾವೆಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿ. ಅಡಿಕೆ ತೋಟದಿಂದ ಘಟನಾ ಸ್ಥಳ 100 ಅಡಿ ಅಂತರದಲ್ಲಿರುತ್ತದೆ. ನಮ್ಮ ಜಮೀನಿನ ಪಕ್ಕದಲ್ಲಿ ಕಾಲ ಸಂಕ ಇರುತ್ತದೆ. ಸೊಪ್ಪಿನ ಬೆಟ್ಟದ ವಿಸ್ತೀರ್ಣ 77 ಎಕರೆ 12 ಗುಂಟೆ ಇರುತ್ತದೆ. ಅದರಲ್ಲಿ ನಾವು 4 ಎಕರೆ ಸ್ವತ್ತನ್ನು ಸಾಗುವಳಿ ಮಾಡುತ್ತಿರುತ್ತೇವೆ. ಸೊಪ್ಪಿನ ಬೆಟ್ಟದಲ್ಲಿ ನಾವು ಸಾಗುವಳಿ ಮಾಡುತ್ತಿರುವ 4 ಎಕರೆ ಸ್ವತ್ತಿಗೆ ಖಾತೆ ಪಹಣಿ ಇರುವುದಿಲ್ಲ. ಪೊಲೀಸರು ಜೀಪಿನಲ್ಲಿ ಬಂದಿದ್ದರು. ಪೊಲೀಸರು ಮಧ್ಯಾಹ್ನ ಬರುತ್ತೇವೆಂದು ಕರೆ ಮಾಡಿ ಚಾಸ 5 ರವರಿಗೆ ತಿಳಿಸಿದ್ದರು. ನಾವು ಸ್ಥಳಕ್ಕೆ 3.30 ಗಂಟೆಗೆ ಹೋದೆವು. ಪೊಲೀಸರು 5 ಗಂಟೆಯವರೆಗೂ ಸ್ಥಳದಲ್ಲಿಯೇ ಇದ್ದರು.

8. ಘಟನೆ ಆದ ನಂತರ ನಾನು ಆಸ್ಪತ್ರೆಗೆ ಆಟೋದಲ್ಲಿ ಹೋಗಿರುತ್ತೇನೆ. ನಮ್ಮ ಮನೆಯಿಂದ ಘಟನಾ ಸ್ಥಳ 1 ಕಿ ಮೀ ಅಂತರದಲ್ಲಿರುತ್ತದೆ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಹೋಗಲು 15 ನಿಮಿಷ ಬೇಕಾಗುತ್ತದೆ. ಆರೋಪಿತರು ಯಾವುದೇ ಗಲಾಟೆ ಮಾಡದಿದ್ದರೂ ಈ ಪ್ರಕರಣ ದಾಖಲಾಗುವ ಸಲುವಾಗಿ ಸುಮ್ಮನೆ ನಾನು ಆಸ್ಪತ್ರೆಗೆ ದಾಖಲಾಗಿರುತ್ತಾನೆ ಎಂದರೆ ಸರಿಯಲ್ಲ. ಸಿವಿಲ್ ವ್ಯಾಜ್ಯಕ್ಕೆ ಸಹಾಯವಾಗಲಿ ಎಂದು ಈ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಯಾವುದೇ ಗಾಯವಾಗದಿದ್ದರೂ ದುರುದ್ದೇಶದಿಂದ ಆಸ್ಪತ್ರೆಗೆ ದಾಖಲಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**